## ಚಳಿಗಾಲದ ಪಾರ್ಟಿಗಾಗಿ

ಚಳಿಗಾಲದಲ್ಲಿ ನಡೆಯುವ ಕೆಲವೊಂದು ಪಾರ್ಟಿಗೆ ನೀವು ಸ್ಲೀವ್‌ಲೆಸ್ ಅಥವಾ ತುಂಬು ತೆಳ್ಳಗಿನ ಉಡುಪು ಧರಿಸುವುದು ಬೇಡ. ಬದಲಾಗಿ ಲಾಂಗ್ ಸ್ಲೀವ್ ಅಥವಾ ಬಿಳಿಯ ಕಸೂತಿಯ ಸ್ವೆಟರ್ ಜೊತೆಗೆ ಕಪ್ಪನೆಯ ಲೆದರ್ ಪ್ಯಾಂಟ್ ಹಾಕಿದರೆ ಇದು ನಿಮ್ಮನ್ನು ಬೆಚ್ಚಗೆ ಇರಿಸುತ್ತದೆ.

ಬರ್ತ್ ಡೇ ಪಾರ್ಟಿಗಳಿಗೆ ಕ್ರಾಪ್ ಟಾಪ್ ಹಾಗೂ ಸ್ಕರ್ಟ್, ರಿಪ್ಡ್ ಜೀನ್ಸ್ ಹಾಗೂ ಸ್ಕರ್ಟ್ಸ್, ಒನ್ ಪೀಸ್ ಬೋಹೊ ಉಡುಪು ಚೆನ್ನಾಗಿ ಕಾಣುತ್ತದೆ. ಮೈಗಂಟುವ ಜೀನ್ಸ್ ಜೊತೆ ಲೆದರ್ ಜಾಕೆಟ್ ಕೂಡ ಈ ತರಹದ ಪಾರ್ಟಿಗಳಿಗೆ ಹೇಳಿಮಾಡಿಸಿದ್ದು.

ಕಾಕ್ ಟೈಲ್ ಪಾರ್ಟಿಯ ವಿಷಯಕ್ಕೆ ಬಂದರೆ ಎ –ಲೈನ್ ಅಥವಾ ಮಾಕ್ ನೆಕ್ ಉಡುಪುಗಳು ತುಂಬಾ ಚೆನ್ನಾಗಿ ಹೊಂದಿಕೆಯಾಗುತ್ತವೆ. ಪ್ಯಾಂಟ್ ಸೂಟ್ಸ್, ಸ್ಲಿಕ್ ಟ್ರೌಸರ್ಸ್ ಅಥವಾ ಪಲಾಜೊ ತರಹದ ಉಡುಪುಗಳು ಚೆನ್ನಾಗಿ ಕಾಣುತ್ತವೆ. ಇವು ಪಾರ್ಟಿಯಲ್ಲಿ ನಿಮಗೆ ಡಿಫರೆಂಟ್ ಐಡೆಂಟಿಟಿ ಬರುವಂತೆ ಮಾಡುತ್ತವೆ.



ಕಾಣಬೇಕು ಎಂಬ ಆಸೆ ಇರುವುದು ಸಹಜ ಗುಣ. ಹಾಗಾಗಿ ಪಾರ್ಟಿಗೆ ಹೋಗಬೇಕಾದಾಗ ಯಾವ ಬಗೆಯ ಉಡುಪುಗಳನ್ನು ಧರಿಸಬಹುದು ಎಂಬ ಬಗ್ಗೆ ಚಿಂತನೆ ನಡೆಸುವುದು ಅಗತ್ಯ.

### ಜಾಕೆಟ್ ಸ್ಟೈಲ್ ಪಾರ್ಟಿವೇರ್

ಕೆಲವೊಂದು ಪಾರ್ಟಿಗಳಿಗೆ ಧರಿಸಲು ಮಿನಿ ಡ್ರೆಸ್‌ಗಳಿಗಿಂತ ಸ್ವಲ್ಪ ವಿಭಿನ್ನವಾದ ಲೆಹಂಗಾ ಚೋಲಿಗಳು ಚೆನ್ನಾಗಿ ಕಾಣುತ್ತವೆ. ಬನಾರಸಿ ಸಿಲ್ಕ್ ಬೋಲ್ಡ್ ಡಿಸೈನರ್ ಲೆಹಂಗಾ ಚೋಲಿಗೆ ಪ್ಲೈನ್ ಮ್ಯಾಚಿಂಗ್ ಶರ್ಟ್ ಹಾಗೂ ಉದ್ದನೆಯ ಕಾಂಟ್ರಾಸ್ಟ್ ಜಾಕೆಟ್ ಹಾಕಿಕೊಂಡರೆ ತುಂಬ ಚೆನ್ನಾಗಿರುತ್ತದೆ. ಇದಕ್ಕೆ ಆಭರಣಗಳ ಹಂಗೂ ಇರುವುದಿಲ್ಲ.

### ಬೋಲ್ಡ್ ರೆಡ್ ಜಂಪ್ ಸೂಟ್

ಜಂಪ್ ಸೂಟ್ ಪಾರ್ಟಿಗೆ ಹೇಳಿ ಮಾಡಿಸಿದ್ದು. ನೋಡುವುದಕ್ಕೆ ಸಖತ್ ಸ್ಟೈಲಿಷ್ ಆಗಿ ಕಾಣುವ ಈ ಉಡುಪು ಧರಿಸುವುದಕ್ಕೆ ಕೂಡ ಆರಾಮದಾಯಕ ಆಗಿರುತ್ತದೆ. ಸ್ಟೈಲ್ ಜೊತೆಗೆ ನಿಮಗೆ ಕಂಫರ್ಟ್ ಕೂಡ ಈ ಉಡುಪು ನೀಡುತ್ತದೆ. ಬೋಲ್ಡ್ ಕಲರ್ ಜಂಪ್ ಸೂಟ್ ಪಾರ್ಟಿಯಲ್ಲಿ ಎಲ್ಲರ ಕಣ್ಣು ನಿಮ್ಮತ್ತ ತಿರುಗುವಂತೆ ಮಾಡುತ್ತದೆ. ಬೋಲ್ಡ್ ಕಲರ್ ಜಂಪ್ ಸೂಟ್ ಧರಿಸಿದಾಗ ಆಭರಣಗಳು ಅದಕ್ಕೆ ವಿರುದ್ಧವಾಗಿ ತಿಳಿ ಬಣ್ಣದ್ದಾಗಿರಲಿ. ಈ ಕಾಂಬಿನೇಷನ್ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಹಾಗೇ ಎತ್ತರದ ಹಿಮ್ಮಡಿಯ ಚಪ್ಪಲಿಗಳು ಇದಕ್ಕೆ ಹೆಚ್ಚು ಹೊಂದಿಕೆಯಾಗುತ್ತವೆ.

### ಧೋತಿ ಸಲ್ವಾರ್ ಸೂಟ್

ಪಾರ್ಟಿಗೆ ಹೋಗುವಾಗ ಸ್ಟೈಲಿಷ್ ಆಗಿ ಕಾಣಿಸಿಕೊಳ್ಳಬೇಕು ಎಂದರೆ ಈ ಧೋತಿ ಸಲ್ವಾರ್ ಸೂಟ್ ಪ್ರಯತ್ನಿಸಬಹುದು. ಇಂಡೋ ವೆಸ್ಟರ್ನ್ ಫ್ಯೂಷನ್ ಸ್ಟೈಲ್‌ನಲ್ಲಿರುವ ಈ ಉಡುಪು ಧರಿಸಿದವರಿಗೆ ಸಖತ್ ಲುಕ್ ಕೊಡುತ್ತದೆ. ಇದಕ್ಕೆ ಹೊಂದಿಕೆಯಾಗುವಂತಹ ಆಭರಣ ಧರಿಸಿದರೆ ಮತ್ತಷ್ಟೂ ಚೆಂದವಾಗಿ ಕಾಣಬಹುದು. ಈ ಧೋತಿ ಸಲ್ವಾರ್ ಸೂಟ್ ಅನ್ನು ಆರಿಸುವಾಗ ರಿಚ್ ಹಾಗೂ ಕ್ಲಾಸಿಕ್, ಹೊಳೆಯುವ ಫ್ಯಾಬ್ರಿಕ್ (ಬಟ್ಟೆ)ಯನ್ನು ಆಯ್ಕೆ ಮಾಡಿ. ಇದು ಪಾರ್ಟಿಗೆ ಧರಿಸುವುದಕ್ಕೆ ಹೇಳಿ ಮಾಡಿಸಿದ್ದು.

### ಪ್ಲೇನ್ ಲೆಹಂಗಾ

ಎಲ್ಲಾ ಪಾರ್ಟಿಗೂ ಮಿನಿ ಸ್ಕರ್ಟ್, ಶೈನಿಂಗ್ ಟಾಪ್‌ಗಳೇ ಬೇಕಾಗಿರುವುದಿಲ್ಲ. ಕೆಲವೊಂದು ಪಾರ್ಟಿಗಳಿಗೆ ಲೆಹಂಗಾದ ಜೊತೆಗೆ ವಿಭಿನ್ನ ಶೈಲಿಯ ಬ್ಲೌಸ್‌ಗಳನ್ನು ಧರಿಸಬಹುದು. ಇದು ಕೂಡ ಸ್ಟೈಲಿಷ್ ಆಗಿ ಕಾಣುತ್ತದೆ. ಪ್ಲೈನ್ ಲೆಹಂಗಾ ಇದ್ದರೆ ಅದಕ್ಕೆ ಮ್ಯಾಚಿಂಗ್ ಆಗುವಂತಹ ರೆಡಿಮೇಡ್ ಬ್ಲೌಸ್ ಸಿಗುತ್ತದೆ. ಇದನ್ನು ಹೊಂದಿಕೆ ಮಾಡಿಕೊಂಡು ಧರಿಸಿದರೆ ಪಾರ್ಟಿಯಲ್ಲಿ ಮಿಂಚಬಹುದು.

### ಪೆನ್ಸಿಲ್ ಸ್ಕರ್ಟ್

ಪಾರ್ಟಿಗೆ ಈ ಪೆನ್ಸಿಲ್ ಸ್ಕರ್ಟ್ ಹೇಳಿ ಮಾಡಿಸಿದ್ದು. ಸಾಕಷ್ಟು ವಿಭಿನ್ನ ಶೈಲಿಯ ಪೆನ್ಸಿಲ್ ಸ್ಕರ್ಟ್‌ಗಳು ಇವೆ. ಮಿರಿ ಮಿರಿ ಮಿಂಚುವ ಪೆನ್ಸಿಲ್ ಸ್ಕರ್ಟ್ ಧರಿಸಿದರೆ ಅದಕ್ಕೆ ಸರಿಯಾಗಿ ಹೊಂದಿಕೆಯಾಗುವಂತಹ ಪ್ಲೇನ್ ಬಣ್ಣದ ಟಾಪ್ ಹಾಕಬಹುದು. ಪ್ಲೇನ್ ಸ್ಕರ್ಟ್ ಧರಿಸಿದರೆ ಅದಕ್ಕೆ ಬೋಲ್ಡ್ ಹಾಗೂ ಗ್ಲಿಟರಿ ಟಾಪ್ ಹೆಚ್ಚು ಸೂಕ್ತ. ಫ್ಯಾನ್ಸಿ ಬೂಟ್ಸ್ ಹಾಗೂ ಹೈ ಹೀಲ್ಸ್ ಧರಿಸಿದರೆ ಲುಕ್ ಚೆನ್ನಾಗಿರುತ್ತದೆ.

### ಲೇಸ್ ಟಾಪ್

ಲೇಸ್ ಟಾಪ್ ಯಾವಾಗಲೂ ಟ್ರೆಂಡ್‌ನಲ್ಲಿರುವಂಥದ್ದು. ಎಲ್ಲಾ ಸಮಯಕ್ಕೂ ಈ ಲೇಸ್ ಟಾಪ್ ಹೇಳಿ ಮಾಡಿಸಿದ್ದು ಎನ್ನಬಹುದು. ಇದು ಪಾರ್ಟಿಯಲ್ಲಿ ಎದ್ದು ಕಾಣುವಂತೆ ಮಾಡುತ್ತದೆ. ಫಿಟ್ ಆಗಿರುವ ಜೀನ್ಸ್‌ಗೆ ಈ ಲೇಸ್ ಟಾಪ್ ಧರಿಸಿದರೆ ಒಳಿತು.

### ಹೈ ಲೋ ಡ್ರೆಸ್

ಹೆಸರೇ ಹೇಳುವಂತೆ ಇದು ಒಂದು ಕಡೆ ಉದ್ದ ಹಾಗೂ ಇನ್ನೊಂದು ಕಡೆ ಚಿಕ್ಕದಾಗಿರುತ್ತದೆ. ಉದ್ದನೆಯ ನಿಲುವಂಗಿ ತರಹ ಕಾಣುವ ಈ ಉಡುಪು ಹಿಂದುಗಡೆ ಉದ್ದವಾಗಿದ್ದು, ಮುಂದುಗಡೆ ಸ್ವಲ್ಪ ಚಿಕ್ಕದಾಗಿರುತ್ತದೆ. ಸಂಜೆಯ ಪಾರ್ಟಿಗೆ ಇದು ತುಂಬ ಚೆನ್ನಾಗಿ ಕಾಣಿಸುತ್ತದೆ. ಇದಕ್ಕೆ ತಕ್ಕದಾದ ಹೇರ್ ಸ್ಟೈಲ್ ಹಾಗೂ ಆಭರಣಗಳನ್ನು ಧರಿಸಿದರೆ ಸಖತ್ ಆಗಿ ಕಾಣಬಹುದು.

ಫ್ಯಾಷನ್ ಜಗತ್ತಿನಲ್ಲಿ ಪಾರ್ಟಿವೇರ್‌ಗಳು ತನ್ನದೇ ಆದ ಸ್ಥಾನ ಪಡೆದುಕೊಂಡಿದ್ದು, ಫ್ಯಾಷನ್‌ಪ್ರಿಯರಿಗೆ ಈಗ ಬಹಳ ಆಯ್ಕೆಗಳಿವೆ. ತಮ್ಮ ಬಜೆಟ್‌ಗೆ ಅನುಕೂಲವಾಗುವಂತಹ ಉಡುಪು ಖರೀದಿಸಿ ಧರಿಸಿ ಖುಷಿ ಖುಷಿಯಾಗಿರಿ. ■